Misc No.8/2022

P.W.:1

ಈ ದಿನ ದಿಃ21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ-1 ಮತ್ತು 3ನೇ ಎದುರುದಾರರ ಪರ ವಕೀಲರಾದ ಶ್ರೀ ಹೆಚ್.ಎಲ್.ಎ ರವರಿಂದಃ-**

1. ನನಗೆ ಓದಲು ಬರೆಯಲು ಬರುವುದಿಲ್ಲ. ಈ ಅರ್ಜಿಯ ಅರ್ಜಿದಾರರು ನಿಮಗೆ ಏನು ಆಗಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೆಲವರು ಅತ್ತೆ ಮತ್ತು ಕೆಲವರು ಅಕ್ಕಂದಿರು ಆಗಬೇಕು ಎಂದು ನುಡಿಯುತ್ತಾರೆ. ನಾವು ಈ ಮೊದಲಿಗೆ ನಮಗೆ ಅಗ್ರಿಮೆಂಟ್ ಆಗಿದೆ ಎಂದು ದಾವೆ ಹೂಡಿದ್ದೇವು. ನಾನು ಆಸಲು ದಾವೆಯನ್ನು 10-12ವರ್ಷಗಳ ಹಿಂದೆ ಹೂಡಿರಬಹುದು. ನಾನು ಆ ದಾವೆಯನ್ನು ಚಂದ್ರ, ನಾಗರಾಜ್ ಮತ್ತು ಚನ್ನಮ್ಮ ರವರ ವಿರುದ್ದ ಹೂಡಿದ್ದೆ. ಅವರುಗಳ ಪೈಕಿ ನಾಗರಾಜ್ ಎನ್ನುವವರು ತೀರಿಕೊಂಡಿರುತ್ತಾರೆ. ನಾಗರಾಜ್ ರವರು ಎಷ್ಟು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆಂದು ನನಗೆ ಖಚಿತವಾಗಿ ಹೇಳಲು ಆಗುವುದಿಲ್ಲ.

2. ಈ ಅರ್ಜಿಯನ್ನು ಹೂಡುವ ಕಾಲಕ್ಕೆ ನಾಗರಾಜು ಅಂದರೆ ನಾಗ ಎನ್ನುವವರು ಮರಣ ಹೊಂದಿದ್ದರು ಎಂದರೆ ಸರಿ. 2ನೇ ಎದುರುದಾರರು ಈ ಅರ್ಜಿ ಹೂಡುವ ಕಾಲಕ್ಕೆ ಮರಣ ಹೊಂದಿದ್ದರು ಎಂಬ ಸಂಗತಿ ನನಗೆ ಮತ್ತು ನನ್ನ ವಕೀಲರಿಗೆ ಗೊತ್ತಿತ್ತು ಎಂದರೆ ಸರಿ. ಅಸಲು ದಾವೆಯನ್ನು ಹೂಡಿದ ನಂತರ ನಾವುಗಳು ಆ ದಾವೆಯನ್ನು ನಡಿಸದೆ ಇರುವ ಕಾರಣಕ್ಕೆ ಆ ದಾವೆಯು ವಜಾಗೊಂಡಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು, ಆದರೆ ನನ್ನ ತಾಯಿಗೆ ಆರೋಗ್ಯ ಸರಿಯಿರಲಿಲ್ಲ ಮತ್ತು ಕುಟುಂಬದಲ್ಲಿ ಇತರೆ ತೊಂದರೆಗಳು ಇದ್ದ ಕಾರಣಕ್ಕೆ ನಾವುಗಳು ನಮ್ಮ ವಕೀಲರನ್ನು ಭೇಟಿಯಾಗಿ ದಾವೆಯ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ನಾವು ಹೂಡಿದ ದಾವೆಯು ಊರ್ಜಿತವಲ್ಲ ಎಂಬ

ಸಂಗತಿ ನಮಗೆ ಗೊತ್ತಿದ್ದ ಕಾರಣಕ್ಕೆ ನಾವು ನಮ್ಮ ವಕೀಲರನ್ನು ಆ ದಾವೆಯಲ್ಲಿ ಹೋಗಿ ಭೇಟಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. 2016 ನೇ ಇಸವಿಯಿಂದ 2022ನೇ ಇಸವಿಯ ವರೆಗೂ ನಾವುಗಳು ಆ ದಾವೆಯ ವಕೀಲರನ್ನು ಭೇಟಿ ಆಗಲಿಲ್ಲ ಎಂದರೆ ಸಾಕ್ಷಿಯು ಕುಟುಂಬದಲ್ಲಿ ತೊಂದರೆ ಇದ್ದ ಕಾರಣಕ್ಕೆ ಭೇಟಿಯಾಗಿಲ್ಲ ಎಂದು ನುಡಿಯುತ್ತಾರೆ. ನಮಗೆ ಕುಟುಂಬದಲ್ಲಿ ಯಾವುದೇ ತೊಂದರೆ ಇಲ್ಲದೆ ಇದ್ದರು ನಾವುಗಳೇ ಉದ್ದೇಶಪೂರ್ವಕವಾಗಿ ಆ ದಾವೆಯಲ್ಲಿ ಹಾಜರಾಗದೆ ಇರುವ ಕಾರಣಕ್ಕೆ ನಮ್ಮ ವಕೀಲರೆ ನಮಗೆ ಸದರಿ ದಾವೆಯನ್ನು ನಡೆಸಲು ಆಸಕ್ತಿ ಇಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿ ಆ ದಾವೆಯನ್ನು ವಜಾ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ದಾವೆಯು ವಜಾಗೊಂಡ ಬಗ್ಗೆ ನಿಮಗೆ ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಾದ ದಿನಾಂಕವನ್ನು ಖಚಿತವಾಗಿ ಹೇಳಲು ನನಗೆ ಆಗುವುದಿಲ್ಲ ಎಂದು ನುಡಿಯುತ್ತಾರೆ. ದಾವೆಯು ವಜಾಗೊಂಡ ಎಷ್ಟು ವರ್ಷಗಳ ನಂತರ ನಾವು ನಮ್ಮ ವಕೀಲರನ್ನು ಭೇಟಿಯಾಗಿ ದಾವೆಯ ಬಗ್ಗೆ ವಿಚಾರಿಸಿರುತ್ತೇವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಎಷ್ಟು ದಿನಗಳ ಕಾಲ ತಡವಾಗಿ ಬಂದಿದ್ದೇವೆ ಎಂದು ನಾವು ನಮ್ಮ ವಕೀಲರಿಗೆ ಹೇಳಿದೇವೋ ಇಲ್ಲವೋ ನನಗೆ ಈಗ ನೆನಪಿಲ್ಲ.

4. ದಾವೆಯು ವಜಾಗೊಂಡ ಬಗ್ಗೆ ನಮಗೆ ದಾವೆ ವಜಾಗೊಂಡ ದಿನವೇ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ದಾವೆಯು ವಜಾಗೊಂಡಿರುವ ವಿಚಾರ ಗೊತ್ತಿದ್ದರು ನಾವುಗಳು ತಕ್ಷಣವೇ ಆ ಬಗ್ಗೆ ಯಾವುದೇ ಕ್ರಮವನ್ನು ಉದ್ದೇಶಪೂರ್ವಕವಾಗಿ ತೆಗೆದುಕೊಳ್ಳದೆ ಈಗ ಯಾವುದೇ ಕಾರಣಗಳು ಇಲ್ಲದೆ ಈ ಅರ್ಜಿಯನ್ನು ಸತ್ತವರ ವಿರುದ್ಧ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

Misc No.8/2022

P.W.:1

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**